**ಬೈಬಲ್ ರಸಪ್ರಶ್ನೆ**

**ಎಫೆಸಿಯರಿಂದ – ಹಿಬ್ರಿಯವರೆಗೆ**

1. ದೇವರು ಕ್ರಿಸ್ತಯೇಸುವಿನಲ್ಲಿ ನಮ್ಮನ್ನು ತಮ್ಮವರನ್ನಾಗಿ ಯಾವಾಗ ಆರಿಸಿಕೊಂಡರು?

   **ಅ. ಜಗತ್ತು ಸೃಷ್ಟಿಯಾಗುವ ಮೊದಲೇ**

   ಆ. ನಮ್ಮ ತಾಯಂದಿರ ಗರ್ಭದಲ್ಲಿ ನಮ್ಮನ್ನು ರೂಪಿಸುವ ಮೊದಲು

   ಇ. ಯೇಸುವಿನ ಶಿಲುಬೆ ಮರಣದ ಮೊದಲು

   ಈ. ಮೊದಲ ಪವಾಡವನ್ನು ಮಾಡುವ ಮೊದಲು

2. ಆಧ್ಯಾತ್ಮಿಕವಾಗಿ ಮೃತರಾಗಿದ್ದ ನಮ್ಮನ್ನು ಕ್ರಿಸ್ತಯೇಸುವಿನೊಡನೆ ಜೀವಂತರನ್ನಾಗಿ ಮಾಡಿದವರು ಯಾರು?

   ಅ. ದೇವದೂತರು

   ಆ. ಪ್ರವಾದಿಗಳು

   **ಇ. ಕರುಣಾಮಯ ದೇವರು**

   ಈ. ಪೌಲನು

3. ಯಾವ ತಳಹದಿಯ ಮೇಲೆ ದೇವಜನರನ್ನು ನಿರ್ಮಿಸಲಾಗಿದೆ?

   ಅ. ದೇವದೂತರು ಮತ್ತು ಸಂತರು ಹಾಕಿದ ತಳಹದಿಯ ಮೇಲೆ. ಯೇಸುಕ್ರಿಸ್ತರೇ ಈ ತಳಹದಿಯ ಮೂಲೆಗಲ್ಲು.

   **ಆ. ಪ್ರೇಷಿತರು ಹಾಗೂ ಪ್ರವಾದಿಗಳು ಹಾಕಿದ ತಳಹದಿಯ ಮೇಲೆ. ಯೇಸುಕ್ರಿಸ್ತರೇ ಈ ತಳಹದಿಯ ಮೂಲೆಗಲ್ಲು.**

   ಇ. ದೇವರು ಮತ್ತು ಪವಿತ್ರಾತ್ಮರು ಹಾಕಿದ ತಳಹದಿಯ ಮೇಲೆ. ಯೇಸುಕ್ರಿಸ್ತರೇ ಈ ತಳಹದಿಯ ಮೂಲೆಗಲ್ಲು.

   ಈ. ಮೇಲಿನ ಯಾವುದೂ ಇಲ್ಲ

4. ಅನ್ಯಜನರ ಮನಸ್ಸಿಗೆ ಕತ್ತಲೆ ಕವಿದು, ದೇವರು ಕೊಡುವ ಜೀವಕ್ಕೆ ಅವರು ಹೊರತಾಗಿರಲು ಕಾರಣವೇನು?

   ಅ. ಏಕೆಂದರೆ ಅವರು ಮೋಶೆಯ ನಿಯಮವನ್ನು ಅನುಸರಿಸುವುದಿಲ್ಲ

   ಆ. ಏಕೆಂದರೆ ಅವರು ದೇಹವನ್ನು ಆತ್ಮಕ್ಕಿಂತ ಹೆಚ್ಚಾಗಿ ಪ್ರೀತಿಸುತ್ತಾರೆ

   **ಇ. ಏಕೆಂದರೆ ಅವರು ಅಜ್ಞಾನಿಗಳೂ ಕಠಿಣ ಹೃದಯಿಗಳೂ ಆಗಿರುವುದರಿಂದ**

   ಈ. ಏಕೆಂದರೆ ಅವರು ಯೇಸುಕ್ರಿಸ್ತರನ್ನು ದ್ವೇಷಿಸುತ್ತಾರೆ

5. “ಕೋಪಮಾಡಬೇಕಾಗಿ ಬಂದರೂ ಪಾಪಮಾಡಬೇಡಿರಿ; ಸೂರ್ಯನು ಮುಳುಗುವ ಮುನ್ನ ನಿಮ್ಮ ಕೋಪವು ಇಳಿಯಲಿ; ಸೈತಾನನಿಗೆ ಅವಕಾಶ ಕೊಡಬೇಡಿ” ಹೀಗೆಂದು ಯಾರು ಯಾರಿಗೆ ಹೇಳಿದರು?

   **ಅ. ಪೌಲನು ಎಫೆಸದವರಿಗೆ**

   ಆ. ಪೌಲನು ಫಿಲಿಪ್ಪಿಯರಿಗೆ

   ಇ. . ಯೇಸು ಪೌಲನಿಗೆ

   ಈ. ಯೇಸು ಫರಿಸಾಯರಿಗೆ

6. ಸತಿ, ಪತಿ, ಮಕ್ಕಳು, ದಾಸ್ಯ ಮತ್ತು ಧಣಿ ಇವರ ನಡುವಿನ ಪ್ರೀತಿ ಮತ್ತು ಗೌರವದ ಬಗ್ಗೆ ಪೌಲನು ಯಾವ ಯಾವ ಪತ್ರಗಳಲ್ಲಿ ಉಲ್ಲೇಖಿಸುತ್ತಾನೆ?

   ಅ. ಕೊಲೊಸ್ಸಿಯರಿಗೆ ಮತ್ತು ಫಿಲಿಪ್ಪಿಯರಿಗೆ ಬರೆದ ಪತ್ರಗಳಲ್ಲಿ

   ಆ. ಫಿಲಿಪ್ಪಿಯರಿಗೆ ಮತ್ತು 1ಥೆಸಲೋನಿಯರಿಗೆ ಬರೆದ ಪತ್ರಗಳಲ್ಲಿ

   **ಇ. ಎಫೆಸಿಯರಿಗೆ ಮತ್ತು ಕೊಲೊಸ್ಸಿಯರಿಗೆ ಬರೆದ ಪತ್ರಗಳಲ್ಲಿ**

   ಈ. 2ಥೆಸಲೋನಿಯರಿಗೆ ಮತ್ತು ಎಫೆಸಿಯರಿಗೆ ಬರೆದ ಪತ್ರಗಳಲ್ಲಿ

7. ಪೌಲನು ನೀಡುವ ‘ದೇವರ ಸಂಪೂರ್ಣ ರಕ್ಷಾಕವಚ’ ಪಟ್ಟಿಯಲ್ಲಿ ಇದನ್ನು ಸಹ ಕಾಣಬಹುದು:

   ಅ. **ರಕ್ಷಣೆಯೆಂಬ ಶಿರಸ್ತ್ರಾಣವನ್ನು ಧರಿಸಿಕೊಳ್ಳಿ; ಪವಿತ್ರಾತ್ಮರ ಕೊಡಿಗೆಯಾದ ದೇವರ ವಾಕ್ಯವು ನಿಮಗೆ ಖಡ್ಗವಾಗಿರಲಿ**

   ಆ. ನಿಮ್ಮ ಮಕ್ಕಳನ್ನು ಕೋಪಕ್ಕೆ ಪ್ರಚೋದಿಸಬೇಡಿ, ಆದರೆ ಅವರನ್ನು ಶಿಸ್ತಿನಲ್ಲಿ ಬೆಳೆಸಿ

   ಇ. ಶಾಂತಿಯ ಬಂಧದಲ್ಲಿ ಆತ್ಮದ ಐಕ್ಯತೆಯನ್ನು ಕಾಪಾಡಿಕೊಳ್ಳಲು ಎಲ್ಲಾ ಪ್ರಯತ್ನಗಳನ್ನು ಮಾಡಿ

   ಈ. ಮೇಲಿನ ಎಲ್ಲವೂ

8. ಇದನ್ನು ಯಾರು ಯಾರಿಗೆ ಹೇಳಿದರು? ”ನಿಮ್ಮನ್ನು ಜ್ಞಾಪಿಸಿಕೊಳ್ಳುವಾಗಲೆಲ್ಲ ನಾನು ದೇವರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ನಿಮಗೋಸ್ಕರ ಯಾವಾಗಲೂ ತುಂಬುಹೃದಯದಿಂದ ಪ್ರಾರ್ಥಿಸುತ್ತೇನೆ.”

   ಅ. ಪೌಲನು ಕೊಲೊಸ್ಸೆಯವರಿಗೆ

   ಆ. ಪೌಲನು ಫಿಲಿಪ್ಪಿಯರಿಗೆ

   ಇ. ಪೌಲನು ಥೆಸಲೋನಿಕದವರಿಗೆ

   ಈ. ಪೌಲನು ತಿಮೋಥಿಯನಿಗೆ

9. ಈ ಪತ್ರದ ಪ್ರತಿಯೊಂದು ಅಧ್ಯಾಯದಲ್ಲೂ ಪೌಲನು “ಸಂಭ್ರಮಿಸು” ಎಂಬ ಪದವನ್ನು ಬಳಸುತ್ತಾನೆ.

   ಅ. ತಿಮೋಥೆಯನಿಗೆ ಬರೆದ ಮೊದಲನೆಯ ಪತ್ರ

   ಆ. ಫಿಲಿಪ್ಪಿಯರಿಗೆ ಬರೆದ ಪತ್ರ

   ಇ. ಕೊಲೊಸ್ಸೆಯವರಿಗೆ ಬರೆದ ಪತ್ರ

   ಈ. ಥೆಸಲೋನಿಕದವರಿಗೆ ಬರೆದ ಮೊದಲನೆಯ ಪತ್ರ

10. ಫಿಲಿಪ್ಪಿಯರಿಗೆ ಬರೆದ ಪತ್ರದಲ್ಲಿ ಯೇಸುವಿನ ದೀನತೆಯನ್ನು ಪೌಲನು ಹೇಗೆ ವಿವರಿಸುತ್ತಾನೆ?

    ಅ. ದೇವಸ್ವರೂಪಿ ತಾನಾಗಿದ್ದರೂ ದೇವರಿಗೆ ಸಮನಾದ ಆ ಪದವಿಯನಾತ ಹಿಡಿದಿಟ್ಟುಕೊಳ್ಳಲಿಲ್ಲ.

    ಆ. ತನ್ನನ್ನೇ ಬರಿದುಮಾಡಿಕೊಂಡು ದಾಸನಾದನು

    ಇ. ಮರಣಪರಿಯಂತ ವಿಧೇಯರಾಗಿ ನಡೆದುಕೊಂಡರು

    ಈ. ಮೇಲಿನ ಎಲ್ಲವೂ

11. ಪೌಲನ ಹಿಂದಿನ ಜೀವನವನ್ನು ಹೀಗೆ ವಿವರಿಸಲಾಗಿದೆ:

    ಅ. ಪೌಲನು ಕ್ರಿಸ್ತನನ್ನು ಪ್ರೀತಿಸುತಿದ್ದನು; ಅವರನ್ನು ನೋಡಲು ಹಾಗು ಅವರಿಗಾಗಿ ಕೆಲಸ ಮಾಡಲು ಕಾಯುತಿದ್ದನು

    ಆ. ಹುಟ್ಟಿದ 8ನೇ ದಿನ ಸುನ್ನತಿ, ಬೆನ್ಯಾಮೀನ್ ಕುಲ, ನಿಷ್ಠಾವಂತ ಫರಿಸಾಯನು, ಅಪ್ಪಟ ಹಿಬ್ರಿಯ, ಧರ್ಮಸಭೆಯ ಹಿಂಸಕನು.

    ಇ. ಅವನು ಯೆಹೂದ ಧರ್ಮವನ್ನು, ವಿಶೇಷವಾಗಿ ಮೋಶೆಯ ನಿಯಮಗಳನ್ನು ದ್ವೇಷಿಸುತ್ತಿದ್ದನು.

    ಈ. ಅವನು ಅನ್ಯಜನನಾಗಿದ್ದನು ಮತ್ತು ಕ್ರೈಸ್ತರನ್ನು ಹಿಂಸಿಸುತ್ತಿದ್ದನು.

12. ಎಪಫ್ರೋದಿತನ ಮೂಲಕ ಪೌಲನಿಗೆ ಉಡುಗೊರೆಗಳನ್ನು ಕಳುಹಿಸಿದವರು ಯಾರು?

    ಅ. ತೀತನು

    ಆ. ತಿಮೋಥೆಯ

    ಇ. ಕೊಲೊಸ್ಸೆಯರು

    ಈ. ಫಿಲಿಪ್ಪಿಯರು

13. “ಅದೃಶ್ಯ ದೇವನ ಸದೃಶ್ಯರೂಪನು, ಸೃಷ್ಠಿಗೆಲ್ಲ ಜೇಷ್ಠಪುತ್ರನಾತ“ ಎಂದು ಪೌಲನು ಯಾರನ್ನು ಕುರಿತು ಉಲ್ಲೇಖಿಸುತ್ತಾನೆ?

    ಅ. ಆದಾಮ

    ಆ. ಅಬ್ರಹಾಮ

    ಇ. ಯೇಸುಕ್ರಿಸ್ತ

ಈ. ನೋವ

14. ಮಾರ್ಕ ಮತ್ತು ಬಾರ್ನಬರ ನಡುವಿನ ಸಂಬಂಧ:

    ಅ. ಸಹೋದರರು

    ಆ. ಹತ್ತಿರದ ನೆಂಟ

    ಇ. ಧಣಿ ಮತ್ತು ದಾಸ

    ಈ. ಆಪ್ತ ಮಿತ್ರರು

15. ಯಾಜಮಾನರು ಮನೆಯಾಳುಗಳನ್ನು ನ್ಯಾಯಬದ್ದ ರೀತಿಯಲ್ಲಿ ನೋಡಿಕೊಳ್ಳುವುದು ಅವಶ್ಯಕ ಎನ್ನಲು ಕಾರಣವೇನು?

    ಅ.  ದೇವರ ಮುಂದೆ ಬುದ್ದಿವಂತಿಕೆಯಿಂದ ನಡೆಯಲು

    ಆ. ಮೋಶೆಯ ಕಾನೂನು ಅದನ್ನು ಬಯಸುತ್ತದೆ

    ಇ. ದೇವರು ಅವರನ್ನು ನ್ಯಾಯಯುತವಾಗಿ ಪರಿಗಣಿಸಲಾಗುತ್ತದೆ

    ಈ. ಸ್ವರ್ಗಲೋಕದಲ್ಲಿ ಅವರಿಗೂ ಒಬ್ಬ ಒಡೆಯನಿರುವುದರಿಂದ

16. ಥೆಸಲೋನಿಕರು ವಿಗ್ರಹದಿಂದ ದೇವರ ಕಡೆಗೆ ಏಕೆ ತಿರುಗಿದರು?

    ಅ. ಆಧ್ಯಾತ್ಮಿಕ ಬಾಯಾರಿಕೆಯಿಂದಾಗಿ

    ಆ. ದೇವರ ವಾಕ್ಯವನ್ನು ಸ್ವೀಕರಿಸಲು

    ಇ. ಜೀವಂತ ಮತ್ತು ನಿಜವಾದ ದೇವರ ಸೇವೆ ಮಾಡಲು

    ಈ. ದೇವರ ಆಶೀರ್ವಾದ ಮತ್ತು ಸೌಖ್ಯವನ್ನು ಸ್ವೀಕರಿಸಲು

17. ಪೌಲ, ಸಿಲ್ವಾನ ಹಾಗು ತಿಮೋಥೆಯರು ಹಗಲಿರುಳೂ ದುಡಿಯಲು ಕಾರಣವೇನು?

    ಅ. ದೇವರ ಶುಭಸಂದೇಶವನ್ನು ಸಾರುವಾಗ, ಯಾರಿಗೂ ಹೊರೆಯಾಗಬಾರದೆಂದು

    ಆ. ಯಾರನ್ನು ಅವಲಂಬಿಸದೆ ತಮ್ಮ ಕೆಲಸ ತಾವು ಮಾಡಬೇಕು ಎಂದು ವಿಶ್ವಾಸಿಗಳನ್ನು ಉತ್ತೇಜಿಸಲು

    ಇ. ಯೆಹೂದಿ ಅಧಿಕಾರಿಗಳು ನಮ್ಮ ಶುಭಸಂದೇಶಕಾರ್ಯಗಳ ಉದ್ದೇಶವನ್ನು ಅನುಮಾನಿಸುವುದಿಲ್ಲವೆಂದು

    ಈ. ತಾವು, ಪವಿತ್ರರು, ನೀತಿವಂತರು ಮತ್ತು ನಡವಳಿಕೆಯಲ್ಲಿ ನಿರ್ದಯರು ಎಂದು ವಿಶ್ವಾಸಿಗಳಿಗೆ ತೋರಿಸಲು

18. ಥೆಸಲೋನಿಯರ ವಿಶ್ವಾಸ ಮತ್ತು ಪ್ರೀತಿಯ ಬಗ್ಗೆ ಪೌಲನಿಗೆ ಶುಭವರ್ತಮಾನವನ್ನು ತಂದವರು ಯಾರು?

    ಅ. ಸಿಲ್ವಾನ

    ಆ. ತಿಮೋಥೆಯ

ಇ. ತೀತ

ಈ. ಮಾರ್ಕ

19. ಪೂರ್ವಕಾಲದಲ್ಲಿ ದೇವರು ನಮ್ಮ ಪಿತೃಗಳೊಡನೆ ಹೇಗೆ ಮಾತನಾಡಿದರು?

    ಅ. ಮೋಶೆಯ ಮೂಲಕ ಹಾಗು ತಮ್ಮ ಪುತ್ರನ ಮುಖೇನ

    ಆ. ಪ್ರವಾದಿಗಳ ಮೂಲಕ ಹಾಗು ತಮ್ಮ ಪುತ್ರನ ಮುಖೇನ

    ಇ. ದೇವದೂತರ ಮೂಲಕ ಹಾಗು ಪವಿತ್ರಾತ್ಮನ ಮುಖೇನ

    ಈ. ಕನಸುಗಳು, ದರ್ಶನಗಳು, ಪ್ರಕಟಣೆಗಳು ಹಾಗು ದೇವದೂತರ ಮುಖೇನ

20. ಫಿಲೆಮೋನ ಹಾಗು ಒನೇಸಿಮನ ನಡುವಿನ ಸಂಬಂಧವೇನು?

    ಅ. ಆಪ್ತಮಿತ್ರರು

    ಆ. ನಿಕಟ ಸಂಬಂಧಿಗಳು

    ಇ. ಧಣಿ ಮತ್ತು ದಾಸ

    ಈ. ಒಬ್ಬ ಯೆಹೂದಿ ಮತ್ತೊಬ್ಬ ಅನ್ಯಜನಾಂಗದವ

21. ಮೆಲ್ಕಿಸದೇಕ ಎಂದರೆ.......... ಮತ್ತು ಸಾಲೇಮಿನ ರಾಜ ಎಂದರೆ...........

    ಅ. ಬ್ರಹ್ಮಾಂಡದ ರಾಜ ಮತ್ತು ಸೇಲಂ ಜಿಲ್ಲೆಯ ರಾಜ

    ಆ. ನ್ಯಾಯ ನೀತಿಯ ಅರಸ ಮತ್ತು ಶಾಂತಿಸಮಾಧಾನದ ಅರಸ

    ಇ. ದೇವದೂತರ ರಾಜ ಮತ್ತು ಸಂತರ ರಾಜ

    ಈ. ಮೇಲಿನ ಯಾವುದೂ ಇಲ್ಲ

22. ಪೌಲನು ಈ ಸಲಹೆಯನ್ನು ಯಾರಿಗೆ ಕೊಡುತ್ತಾನೆ? “ಸತ್ಕಾರ್ಯಗಳನ್ನು ಮಾಡುವುದರಲ್ಲಿ ನೀನೆ ಮಾದರಿಯಾಗಿರಬೇಕು; ನಿನ್ನ ಬೋಧನೆ ಯಥಾರ್ಥವೂ ಗಂಭೀರವೂ ಕಳಂಕರಹಿತವೂ ಆಗಿರಲಿ”

    ಅ. ತಿಮೋಥೆಯ

    ಆ. ತೀತ

    ಇ. ಸೀಲ

    ಈ. ಮೇಲಿನ ಯಾವುದೂ ಅಲ್ಲ

23. “ಬಾಳಿನ ಸ್ಪರ್ಧೆಯಲ್ಲಿ ಭಾಗವಹಿಸಿದ್ದೇನೆ. ನನ್ನ ಓಟವನ್ನು ಮುಗಿಸಿದ್ದೇನೆ. ವಿಶ್ವಾಸವನ್ನು ಕಾಪಾಡಿಕೊಂಡಿದ್ದೇನೆ” ಎಂಬ ಈ ಹೇಳಿಕೆಯನ್ನು ನಾವು ಎಲ್ಲಿ ಕಾಣಬಹುದು?

    ಅ. ಕೊಲೊಸ್ಸೆ 1:20

    ಆ. 1ಥೆಸಲೋನಿಯ 5:11

ಇ. ಫಿಲಿಪ್ಪಿ 2:4

ಈ.  2 ತಿಮೋಥೆಯ 4:7

24. ಈ ವಾಕ್ಯವನ್ನು ಪೂರ್ಣಗೊಳಿಸಿ: " ದೇವರು ನಮಗೆ ಪ್ರಧಾನಮಾಡಿರುವ ಪವಿತ್ರಾತ್ಮ ನಮ್ಮನ್ನು ಹೇಡಿಗಳನ್ನಾಗಿ ಮಾಡುವುದಿಲ್ಲ ಬದಲಿಗೆ............

    ಅ. ನಮ್ಮಲ್ಲಿ ದೈವೀಶಕ್ತಿ, ಪ್ರೀತಿ ಹಾಗೂ ಸಂಯಮಗಳು ಪ್ರವರ್ಧಿಸುವಂತೆ ಮಾಡುತ್ತಾರೆ

    ಆ.  ನಮ್ಮಲ್ಲಿ ಅಂಜುಬುರುಕತೆ , ವ್ಯರ್ಥವೈಭವ ಮತ್ತು ಸ್ವಾರ್ಥ ಮನೋಭಾವ ಉಂಟುಮಾಡುತ್ತದೆ.

    ಇ. ಯೌವನತೆ, ಆತ್ಮತ್ಯಾಗ ಮತ್ತು ಕಠಿಣ ಪರಿಶ್ರಮತೆ ಉಂಟುಮಾಡುತ್ತದೆ

    ಈ ಮೇಲಿನ ಯಾವುದೂ ಅಲ್ಲ

25. ಪವಿತ್ರರಾಗುವವರನ್ನು "ಸಹೋದರರು" ಎಂದು ಕರೆಯಲು ಯೇಸು ಏಕೆ ನಾಚಿಕೆಪಡುತ್ತಿಲ್ಲ?

    ಅ.  ಏಕೆಂದರೆ  ಮಾತೆ ಮರಿಯಳಿಗೆ ಯೇಸುವಿನ ಹೊರತಾಗಿ ಇನ್ನೂ ಆನೇಕ ಮಕ್ಕಳಿದ್ದರು.

    ಆ. ಏಕೆಂದರೆ  ಪವಿತ್ರಗೊಳಿಸುವವನಿಗೂ ಪವಿತ್ರ ರಾಗುವವರಿಗೂ ಒಬ್ಬನೇ ತಂದೆ.

    ಇ. ಏಕೆಂದರೆ   ಯೇಸುವಿನ ತಾಯಿಯೊಂದಿಗೆ  ಸಹೋದರಿ ಸಹೋದರರು ಇದ್ದರು.

    ಈ. ಏಕೆಂದರೆ ವಿಶ್ವಾಸಿಗಳನ್ನು ಸಹೋದರ ಸಹೋದರಿಯರು ಎಂದು ಕರೆಯಲಾಗುತ್ತದೆ.

26. ಶೋಧನೆಗೊಳಗಾಗುವವರಿಗೆ ನೆರವಾಗಲು ಯೇಸು ಹೇಗೆ ಸಮರ್ಥರಾದರು?

    ಅ. ಏಕೆಂದರೆ ಅವರು ದೇವರ ಮಗನು

    ಆ. ಏಕೆಂದರೆ ಅವರಿಗೆ ಪವಾಡಗಳನ್ನು ಮಾಡುವ ಶಕ್ತಿ ಇದೆ.

    **ಇ. ಏಕೆಂದರೆ ಸ್ವತಃ ತಾವೇ ಶೋಧನೆಗೊಳಗಾಗಿ ಯಾತನೆಯನ್ನು ಅನುಭವಿಸಿದರು.**

    ಈ. ಏಕೆಂದರೆ ಅವರೇ ಇವರನ್ನು ಶೋಧನೆಗೆ ಒಳಪಡಿಸುತ್ತಾರೆ.

27. ದೇವರ ವಾಕ್ಯವನ್ನು ಹಿಬ್ರಿಯರಿಗೆ ಬರೆದ ಪತ್ರದಲ್ಲಿ ಹೀಗೆ ವಿವರಿಸಲಾಗಿದೆ:

    ಅ. ಅದು ಎಲ್ಲವೂ ಅಸ್ತಿತ್ವಕ್ಕೆ ಬರುವಂತೆ ಮಾಡುವ ಸೃಷ್ಟಿಯ ಶಕ್ತಿಯನ್ನು ಹೊಂದಿದೆ.

    **ಆ. ಅದು ಜೀವಂತವಾದುದು, ಕ್ರಿಯಾತ್ಮಕವಾದುದು; ಎಂಥಹ ಇಬ್ಬಾಯಿ ಕತ್ತಿಗಿಂತಲೂ ಹರಿತವಾದುದು.**

    ಇ.ಅದು ಪ್ರವಾದಿಗಳು ಮಾತನಾಡಿದಾಗ ಮಾತ್ರ ಸಜೀವವುಳ್ಳದ್ದು.

    ಈ. ಅದು ಪರವಶಭಾಷೆಯನ್ನು ಹೊಂದಿರುವವರಲ್ಲಿ ಸಕ್ರಿಯವಾಗಿರುವಂತದ್ದು.

28. ಯೇಸುವಿನ ಯಾಜಕತ್ವವನ್ನು ಈ ಪರಂಪರೆಯಲ್ಲಿ ಉಲ್ಲೇಖಿಸಲಾಗಿದೆ.

    ಅ. ಆರೋನ

**ಆ. ಮೆಲ್ಕಿಸದೇಕ**

ಇ. ನೋಹ

ಈ. ಮೇಲಿನ ಯಾವುದೂ ಅಲ್ಲ.

29. ಯೇಸು ಈ ಕುಲಕ್ಕೆ ಸೇರಿದವರು.

ಅ. ಬೆಂಜಮಿನ್

ಆ. ಮನಸ್ಸೆ

**ಇ. ಯೆಹೂದ**

ಈ. ಲೇವಿ

30. ಇತರ ಯಾಜಕರು ಯೇಸುವಿಗಿಂತ ಹೇಗೆ ವಿಭಿನ್ನರಾಗಿರುವರು?

ಅ. ಇತರ ಯಾಜಕರು ಪ್ರತಿನಿತ್ಯ ಪರಿಹಾರ ಬಲಿ ಅರ್ಪಿಸುತ್ತಲೇ ಇರುವರು.

ಆ. ಇತರ ಯಾಜಕರ ಬಲಿಯರ್ಪಣೆಗಳು ಶಾಶ್ವತವಾಗಿ ಪಾಪಗಳನ್ನು ನಿವಾರಿಸುವುದಿಲ್ಲ.

ಇ. ಇತರ ಯಾಜಕರು ಮಲೀನರಾದವರನ್ನು ಶಾರೀರಿಕ ಮೈಲಿಗೆಯಿಂದ ಮಾತ್ರ ಶುದ್ಧಗೊಳಿಸುವರು

**ಈ. ಮೇಲಿನ ಎಲ್ಲವೂ**.

ಪಿತಾಮಹಾ ಅಬ್ರಹಾಮನು ತಾನು ಗೆದ್ದು ತಂದ ಎಲ್ಲದರಲ್ಲೂ ಯಾರಿಗೆ ದಶಮಾಂಶವನ್ನು ನೀಡಿದನು?

ಅ. ತನ್ನೊಂದಿಗೆ ಯುದ್ಧಕ್ಕೆ ಬಂದ ಸಂಬಂಧಿಕರಿಗೆ

ಆ. ರಾಜ ಅಭಿಮೆಲಕನಿಗೆ

ಇ. ತಂದೆ ದೇವರಿಗೆ

ಈ. **ಸಾಲೇಮಿನ ರಾಜ ಮಹೋನ್ನತ ದೇವರ ಯಾಜಕ ಮೆಲ್ಕಿಸದೇಕನಿಗೆ.**

31. ಪೌಲನು ವಿಶ್ವಾಸಿಗಳಿಗೆ "ನಿಮ್ಮ ಮನಸ್ಸು ಪ್ರಾಪಂಚಿಕ ವಿಷಯಗಳ ಮೇಲೆ ಅಲ್ಲ, ಸ್ವರ್ಗೀಯ ವಿಷಯಗಳ ಮೇಲೆ ಕೇಂದ್ರೀಕೃತವಾಗಿರಲಿ" ಎಂದೇಳ ಲು ಕಾರಣವೇನು?

**ಅ. 'ನೀವು ಕ್ರಿಸ್ತೇಸುವಿನೊಂದಿಗೆ ಮರಣಹೊಂದಿರುವುದರಿಂದ ಅವರೊಂದಿಗೆ ನಿಮ್ಮ ಜೀವ ದೇವರಲ್ಲಿ ಮರೆಯಾಗಿದೆ'.**

ಆ. 'ಅಲ್ಲಿ ಯಾವಾಗಲೂ ಶಾಂತಿ ಸಂತೋಷ ಇರುತ್ತದೆ'.

ಇ. 'ದೂತರು ನಿಮ್ಮನ್ನು ಕಾಪಾಡುವರು ಮತ್ತು ನೀವು ಆನಂದವನ್ನು ಅನುಭವಿಸುವಿರಿ'.

ಈ. ಮೇಲಿನ ಎಲ್ಲವೂ.

32. ಪೌಲನ ಪ್ರಕಾರ ನಮ್ಮ ಪ್ರಭುವು ಸ್ವರ್ಗದಿಂದ ಹೇಗೆ ಇಳಿದು ಬರುತ್ತಾರೆ?

ಅ. ಆಜ್ಞಾಘೋಷವಾದಾಗ

ಆ.ಪ್ರಧಾನ ದೂತನ ಧ್ವನಿಯು ಕೇಳಿಬಂದಾಗ

ಇ.ದೇವರ ತುತ್ತೂರಿನಾದ ಗೈದಾಗ

**ಈ. ಮೇಲಿನ ಎಲ್ಲವೂ.**

34. ಸಾಮಾನ್ಯವಾಗಿ, ಪೌಲನು ತನ್ನ ಪತ್ರಗಳನ್ನು ಹೀಗೆ ಮುಕ್ತಾಯಗೊಳಿಸುತ್ತಾನೆ?

ಅ. 'ನಾನು ಇದನ್ನು ನನ್ನ ಕೈಯಿಂದಲೇ ಬರೆಯುತ್ತಿದ್ದೇನೆ'.

ಆ. 'ಸಹೋದರ ಸಹೋದರಿಯರೇ ದಯವಿಟ್ಟು ನನಗಾಗಿ ಪ್ರಾರ್ಥಿಸಿರಿ'.

**ಇ. 'ನಮ್ಮ ಪ್ರಭುವಾದ ಯೇಸುಕ್ರಿಸ್ತರ ಅನುಗ್ರಹವು ನಿಮ್ಮಲ್ಲಿರಲಿ'**

ಈ. 'ನಾನು ನಿಮ್ಮೆಲ್ಲರಿಗಾಗಿ ದೇವರಿಗೆ ಕೃತಜ್ಞತೆ ಸಲ್ಲಿಸುತ್ತೇನೆ'.

35. "ದುಡಿಯಲೊಲ್ಲದವನು ಉಣಲೂಬಾರದು" ಯಾರು ಯಾರಿಗೆ ಹೇಳಿದರು?

ಅ. ಯೇಸು ಪೌಲನಿಗೆ.

**ಆ. ಪೌಲ ಥೆಸಲೋನಿಯರಿಗೆ.**

ಇ. ಪೌಲ ಕೊಲೊಸ್ಸೆಯವರಿಗೆ.

ಈ. ಪೌಲ ತೀತನಿಗೆ.

36. ಅರಸರಿಗಾಗಿಯೂ ಎಲ್ಲಾ ಅಧಿಕಾರಿಗಳಿಗಾಗಿಯೂ ಪ್ರಾರ್ಥಿಸಬೇಕೆಂದು ಪೌಲನು ಹೇಳುವುದರ ಕಾರಣವಿದು:

**ಅ. ನಾವು ದೈವಭಕ್ತಿಯುಳ್ಳವರಾಗಿ ಮತ್ತು ಗೌರವಯುತರಾಗಿ ಶಾಂತಿ ಸಮಾಧಾನದಿಂಲೂ, ನೆಮ್ಮದಿಯಿಂಲೂ ಜೀವಿಸಲು ಅನುಕೂಲವಾಗುವಂತೆ.**

ಆ. ಅವರು ದೇಶವನ್ನು ವಿಭಜಿಸಿ ಯುದ್ಧಗಳನ್ನು ಮಾಡದಂತೆ.

ಇ. ಅವರು ದೇಹದ ಪ್ರಲೋಭನೆಗಳಿಗೆ ಒಳಗಾಗದಂತೆ.

ಈ. ಅವರು ಉತ್ತಮ ಆರೋಗ್ಯವನ್ನು ದೀರ್ಘಾಯಸ್ಸನ್ನು ಹೊಂದುವಂತೆ.

37. ಇದನ್ನು ಪೂರ್ಣಗೊಳಿಸಿ. "ತನ್ನ ಕುಟುಂಬವನ್ನೇ ಜವಾಬ್ದಾರಿಯುತವಾಗಿ ನಡೆಸಲು ತಿಳಿಯದವನು_______________".

**ಅ. ದೇವರ ಸಭೆಯನ್ನು ಹೇಗೆ ತಾನೇ ಪರಿಪಾಲಿಸಿಯಾನು?**

ಆ.  ಅಪೋಸ್ತಲರನ್ನು ಹೇಗೆ ನೋಡಿಕೊಳ್ಳುವನು?

ಇ. ದೇವರ ರಾಜ್ಯವನ್ನು ಹೇಗೆ ಪ್ರವೇಶಿಸುವನು?

ಈ. ಸಂಗ್ರಹಿಸಿದ ಹಣವನ್ನು ಹೇಗೆ ನಿರ್ವಹಿಸುವನು?

38. ಪ್ರಭುವಿನ ದಿನವು  ಹೇಗೆ ಬರುತ್ತದೆ?

ಅ. ಗುಡುಗು ಮತ್ತು ಮಿಂಚಿನೊಂದಿಗೆ.

ಆ. ದೇವದೂತರ ಘೋಷಣೆಯೊಂದಿಗೆ

ಇ. ಪ್ರಪಂಚದ ವಿನಾಶದೊಂದಿಗೆ.

**ಈ. ರಾತ್ರಿಯಲ್ಲಿ ಕಳ್ಳನಂತೆ.**

39. ಪೌಲನು ಯಾವುದನ್ನು ನಷ್ಟ ಮತ್ತು ವ್ಯರ್ಥವೆಂದು ಪರಿಗಣಿಸುತ್ತಾನೆ?

ಅ. ಅನ್ಯ ಜನರೊಂದಿಗಿನ ಅವನ ಒಡನಾಟ

**ಆ. ಅವನು ಹೆಮ್ಮೆ ಪಡುತ್ತಿದ್ದ ಹಿಂದಿನ ಜೀವನ**

ಇ. ಶತ್ರುಗಳ ಕೈಯಲ್ಲಿ ಅವನು ಅನುಭವಿಸಿದ ಯಾತನೆ.

ಈ. ಫರಿಸಾಯರು ಮತ್ತು ಸದ್ದುಕಾಯರೊಂದಿಗಿನ ಸ್ನೇಹ.

40.  ಕ್ರಿಸ್ತನಲ್ಲಿ ಐಕ್ಯತೆ ಎಂದರೆ:

**ಅ.  ಪ್ರಭು ಒಬ್ಬರೇ;, ವಿಶ್ವಾಸವೂ ಒಂದೇ, ದೀಕ್ಷಾಸ್ನಾನವೂ ಒಂದೇ, ದೇವರು ಒಬ್ಬರೇ.**

ಆ. ಪರಮ ಪ್ರಸಾದದಮೂಲಕ ಕ್ರಿಸ್ತನ ದೇಹದಲ್ಲಿ ಐಕ್ಯವಾಗುವುದು.

ಇ. ಯೆಹೂದಿಗಳನ್ನು ಮತ್ತು ಅನ್ಯ ಜನರನ್ನು ಪ್ರೀತಿಸುವುದು.

ಈ. ಧರ್ಮಸಭೆಯಲ್ಲಿ ಬಡವ ಶ್ರೀಮಂತರ ನಡುವೆ ವ್ಯತ್ಯಾಸವಿಲ್ಲದಿರುವುದು.